# 71

# ಅರಸನು ನೀಡಿದ ಒಂದು ಆಮಂತ್ರಣ!

## ಮತ್ತಾಯ 22:1-14, ಒಂದು ನಿಕಟ ನೋಟ

ಬಾಗಿಲನ್ನು ತಟ್ಟುವ ಶಬ್ದವನ್ನು ಕೇಳಿ, ನೀವು ಬಾಗಿಲು ತೆರೆಯುವಾಗ, ಒಬ್ಬ ಗೌರವಸ್ಥ ಮನುಷ್ಯನು ನಿಮ್ಮೆದುರಿಗೆ ನಿಂತಿರುವನೆಂದು ಊಹಿಸಿಕೊಳ್ಳಿ. ನಾನು ಒಂದು ಪತ್ರವನ್ನು ನಿಮಗೆ ನೀಡಲು, "ಈಗ ತಾನೇ ವಾಶಿಂಗ್‌ಟನ್‌ನಿಂದ" ಬಂದಿರುತ್ತಾನೆ. ಅಮೇರಿಕಾದ ಸ್ಥಿತಿಗತಿಗಳನ್ನು ನೋಡಲು, ಅಮೇರಿಕಾದ ಅಧ್ಯಕ್ಷರು ತಮ್ಮನ್ನು ಆಹ್ವಾನ ಮಾಡಿದ್ದಾರೆ. "ಈಗ ನಿಮಗಾಗಿ ವಾಹನವು ಸಹ ಸಿದ್ಧವಾಗಿದೆ." "ಬೇಗನೇ ಸಿದ್ಧವಾಗಿರ್ರಿ, ನಾನು ನಿಮ್ಮನ್ನು ವಿಮಾನ ನಿಲ್ದಾಣಕ್ಕೆ ಕರೆದೊಯ್ಯುವೆನು. ನಿಮಗಾಗಿ ಅಧ್ಯಕ್ಷರ ವಿಮಾನವು ಸಿದ್ಧವಾಗಿದೆ."[1] ಅದು ಬಹಳ ಸಂತೋಷಕರವಲ್ಲವೇ. ಹೇಗೂ ಈ ದಿನದ ಪ್ರಸಂಗವು ಒಂದು ಆಮಂತ್ರಣದ ಕುರಿತಾಗಿದೆ. ಅದು ಆಶಾದಾಯಕವಾದದ್ದು: ಭೂಲೋಕವನ್ನೇ ಆಳುತ್ತಿರುವ ಒಬ್ಬ ಅರಸನಿಂದ, ಬಂದ ಆಮಂತ್ರಣವಾಗಿದೆ!

ಮತ್ತಾಯ 22:1-14 ನಮ್ಮ ವಾಕ್ಯ ಭಾಗವಾಗಿದೆ. ಯೇಸುವಿನ ಸೇವಾಕಾಲದ ಅಂತ್ಯವಾರದಲ್ಲಿ ಈ ವಾಕ್ಯವನ್ನು ಬೋಧಿಸಲಾಗಿದೆ. ಅದು ಮಂಗಳವಾರ ಅಂದರೆ "ಪ್ರಶ್ನೆಗಳ ಮಹಾ ದಿನದಲ್ಲಿ" ಸಂಭವಿಸಿರುತ್ತದೆ. ಕ್ರಿಸ್ತನು ದೇವಾಲಯದಲ್ಲಿ ಪ್ರಸಂಗಿಸುತ್ತಿರುವಾಗ ಹಿರೀ ಸಭೆಯವರು ಆತನನ್ನು ಪ್ರಶ್ನಿಸಿದರು. ಅವರು ಆತನಿಗೆ, "ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ?" ಅಂದರು (ಮತ್ತಾಯ 21:23). ಆ ವೈರಿಗಳ ಪ್ರಶ್ನೆಗಳನ್ನು ಆತನು ಮೂರು ವಿಧಗಳ ಸಾಮ್ಯಗಳಿಂದ ಉತ್ತರಿಸಿದನು. ಮೊದಲನೆಯದು, ಎರಡು ಸಹೋದರರ ಸಾಮ್ಯವಾದರೆ, ಎರಡನೆಯದು ಕೆಟ್ಟ ಮನೆ ವಾರ್ತೆಯವನದು. ಮೂರನೆಯದು, ಅರಸನ ಮಗನ ವಿವಾಹದ ಔತಣದ ಸಾಮ್ಯ. ಈ ಹಿಂದೆಯು ಸಹ ಆತನು ಇದೇ ವಿಧವಾದ ಸಾಮ್ಯವನ್ನು ಹೇಳಿದ್ದನು (ಲೂಕ 14), ಆದರೆ ಈಗಿನ ಸಾಮ್ಯದಲ್ಲಿ ವಿವಿಧವಾದ ಅರ್ಥಗಳಿವೆ. ಎರಡು ಸಾಮ್ಯಗಳು ಒಗ್ಗೂಡಿರುವ ಒಂದೇ ಸಾಮ್ಯ.[2] ಎರಡನೆಯದನ್ನು "ಮದುವೆಯ ಉಡುಪಿನ ಸಾಮ್ಯ" ಎನ್ನಬಹುದು.

ನಾನು ಈ ಪ್ರಸಂಗವನ್ನು "ಅರಸನಿಂದ ಒಂದು ಆಮಂತ್ರಣ!" ಎಂದು ಹೆಸರಿಸಿದ್ದೇನೆ. ಈ ಆಮಂತ್ರಣದ ಕುರಿತು ಮೂರು ಸತ್ಯಗಳನ್ನು ನೋಡೋಣ.

### ಇದು ಆನಂದ ಭರಿತವಾದ ಆಮಂತ್ರಣ
### (ವಚನ 1-3)

**ಸಾಮ್ಯ**

"ಯೇಸು ಬೋಧನೆ ಮಾಡುತ್ತಾ, ಇನ್ನು ಸಾಮ್ಯರೂಪವಾಗಿ ಅವರಿಗೆ ಹೇಳಿದ್ದೇನೆಂದರೆ, - ಪರಲೋಕ ರಾಜ್ಯವು ಮಗನಿಗೆ[3] ಮದುವೆ ಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ" (ವಚನಗಳು 1, 2). ಸಾಮ್ಯದ ಅರಸನು ದೇವರೇ ಆಗಿದ್ದಾನೆ. "ಅವನು ಮದುವೆಗೆ ಹೇಳಿಸಿಕೊಂಡವರನ್ನು ಕರೆಯುವದಕ್ಕೆ ತನ್ನ ಆಳುಗಳನ್ನು ಕಳುಹಿಸಿದನು" ಎಂದು ಸಾಮ್ಯವು ಆರಂಭವಾಗುತ್ತದೆ (ವಚನ 3ಎ).

**ಮುಖ್ಯಾಂಶ**

ಮೊದಲು ಆಮಂತ್ರಣದ ಸ್ವಭಾವವನ್ನು ನೋಡೋಣ. ಅದು ಮದುವೆಯ ಔತಣ, ಹಾಗೂ ಹಬ್ಬದ ವಾತಾವರಣವಾಗಿತ್ತು. ಹಳೇ ಒಡಂಬಡಿಕೆಯ ಪ್ರಕಾರ ಮದುವೆಯ ಔತಣವು "ಮೆಸ್ಸೀಯನ ಆಡಳಿತದ ಯುಗದ" ಸೂಚನೆಯಾಗಿತ್ತು. ಅಂದರೆ ಕ್ರೈಸ್ತತ್ವದ ಬರುವಿಕೆಯ ಸಂಕೇತವಾಗಿತ್ತು.[5] ಈ ವಿಧವಾದ ಮಾತಿನ ಆಕಾರಗಳು ಹೊಸ ಒಡಂಬಡಿಕೆಯಲ್ಲಿ ಮುಂದುವರೆದಿರುತ್ತದೆ.[6] ಸಭೆಗೆ ಕ್ರಿಸ್ತನು ಶಿರಸ್ಸಾಗಿದ್ದಾನೆ (ಎಫೆಸ 5:23-27, 31, 32; ನೋಡಿ 2 ಕೊರಿಂಥ 11:2).[7] ಅಂದರೆ "ಮದುವೆಯ ಔತಣವು" ಈಗಾಗಲೇ ಆರಂಭವಾಗಿದೆ.[8] ಅದು ನಿತ್ಯತ್ವಕ್ಕೆ ಸಾಗುವದಾಗಿದೆ, ಪ್ರಕಟನೆಯಲ್ಲಿ ದೇವಜನರ ಜಯದ ಆಚರಣೆಯನ್ನು ಗಮನಿಸುತ್ತೇವೆ: "ಯಜ್ಞದ ಕುರಿಯಾದಾತನ ವಿವಾಹಕ್ಕೆ ಕರೆಯಲ್ಪಟ್ಟವರು ಧನ್ಯರು" (ಪ್ರಕಟನೆ 19:9ಎ).

ಈ ಒಂದು ಉದಾಹರಣೆಯಿಂದ, ಕ್ರೈಸ್ತ ಜೀವಿತದಲ್ಲಿ ದೊರೆಯುವ ಧನ್ಯತೆ ಹಾಗೂ ಆನಂದದ ಕುರಿತಾಗಿ ಅರಿಯಬಹುದಾಗಿದೆ. ದ್ರಾಕ್ಷೆಯ ತೋಟದ ಕೆಲಸಕ್ಕೆ ದೇವರ ರಾಜ್ಯವನ್ನು ಹೋಲಿಸಲಾಗಿದೆ. ಆದರೆ ಕ್ರೈಸ್ತತ್ವಕ್ಕೆ ಇಷ್ಟೆ ಸೀಮಿತವಾಗಿರದೆ,[9] ಅಧಿಕವಾದ ಆನಂದವು ಸಹ ಇರುತ್ತದೆ.

ಆದರೆ ಅನೇಕ ಕ್ರೈಸ್ತರು ಈ ವಿಚಾರವನ್ನು ಗಮನಿಸುವದಿಲ್ಲ. ನಾಲ್ಕು ಶತಮಾನಗಳ ಹಿಂದೆ ಬರೆಯಲಾದ ಪತ್ರಿಕೆಯಲ್ಲಿ ಕ್ರಿಸ್ತನ ಧೈಹೀಕ ಆಕಾರದ ಕುರಿತು ವಿವರಣೆ ನೀಡಲಾಗಿದೆ. ಇತರೆ ಸಂಗತಿಗಳ ಪ್ರಕಾರ, "ಕರ್ತನ ನಗುವನ್ನು ವಿವರಿಸದೆ, ಆತನು ಕಣ್ಣೀರಿಟ್ಟನು ಎಂದು ಬರೆಯಲಾಗಿದೆ."[10] ಅದಕ್ಕೆ ಯಾವುದೇ ವಿಧವಾದ ಮೂಲವು ಇರುವದಿಲ್ಲ.[11] ಅದು ಯೇಸುವಿನ ಕುರಿತಾದ ಮೊದಲ ಬರವಣಿಗೆಯಾಗಿರುವದರಿಂದ, ನಂತರದ ಯುಗದಲ್ಲಿನ ಕಲೆ ಮತ್ತು ಕೆತ್ತನೆಗಳಲ್ಲಿ ಪ್ರಭಾವ ಬೀರಿತ್ತು, ಆದ್ದರಿಂದ ಈ ದಿನಗಳಲ್ಲಿಯೂ ಸಹ ಯೇಸುವಿನ ನಗುಮುಖದ ಚಿತ್ರಗಳು ಇರುವದಿಲ್ಲ.[12]

ವರ್ಷಗಳ ನಂತರದಲ್ಲಿ, ಆತನ ಅನುಯಾಯಿಗಳು ಎನ್ನಿಸಿಕೊಂಡವರು, ಕ್ರೈಸ್ತತ್ವದಲ್ಲಿ ಅಲ್ಪ ಆನಂದವು ಇರಬೇಕೆಂದು ಯತ್ನಿಸಿದರು. ಧರ್ಮಶುದ್ಧಿವಾದಿಗಳು "ಮಕ್ಕಳ ಆಟಿಗೆ ಸಾಮಾನುಗಳು" "ಮಾನವ ನಿರ್ಮಿತವಾದವುಗಳು" ಎಂದು ಅವುಗಳನ್ನು ನಿಷೇದಿಸಿದ್ದರು. ಜಾನ್ ವೆಸ್ಲಿಯವರು, ಮಕ್ಕಳಿಗಾಗಿ ಬೋರ್ಡಿಂಗ್ ಶಾಲೆಗಳನ್ನು ತೆರೆದಾಗ, ಆ ಮಕ್ಕಳು ಮುಂಜಾನೆ ನಾಲ್ಕು ಗಂಟೆಗೆ ಏಳಬೇಕಿತ್ತು. ಬೇಸಿಗೆ ಮತ್ತು ಚಳಿಗಾಲದಲ್ಲಿ ಈ ಕ್ರಮವು ಮುಂದುವರೆದಿತ್ತು. ಅವರ ಶಾಲೆಗಳಲ್ಲಿ ವಿಶ್ರಾಂತಿಯ ತಾಸು ಹಾಗೂ ರಜಾಕಾಲಗಳಿರಲಿಲ್ಲ, ಯಾವುದೇ ಆಟಗಳು ಇರಲಿಲ್ಲ.

ಇಂಥಹ ಒಂದು ಬೇಸರದ ಭಿನ್ನಾಭಿಪ್ರಾಯಗಳ ನಡುವೆ ಪೌಲನು, ಯಾವಾಗಲೂ "ಕರ್ತನಲ್ಲಿ ಸಂತೋಷಿಸಿರಿ, ಸಂತೋಷಪಡಿರಿ" ಎಂದು ಬರೆದನು (ಫಿಲಿಪ್ಪಿ 4:4). ನಾನು ಮತ್ತೊಂದು ಬಾರಿ, ಮದುವೆಯ ಔತಣದ ಕರೆಯು ಆನಂದಮಯವಾದ ಆಮಂತ್ರಣ ಎಂದು ಹೇಳುತ್ತೇನೆ.

ಈ ವಿಚಾರದ ಕುರಿತು ಎರಡು ಅಂಶಗಳನ್ನು ಗಮನಿಸೋಣ (1) ನಾವು ಅರಸನು ನೀಡಿರುವ ಆಮಂತ್ರಣವನ್ನು ಅಲಕ್ಷಿಸಿದರೆ, ನಾವು ಆನಂದವನ್ನು ನಿರಾಕರಿಸುತ್ತಿದ್ದೇವೆ. ಆಮಂತ್ರಣವನ್ನು ನಿರಾಕರಿಸಿದವರು ಎರಡು ಗಂಡಾಂತರಗಳನ್ನು ಎದುರಿಸಬೇಕಾಯಿತು: ಅವರು ಹೊರ ಹಾಕಲ್ಪಡುವುದಲ್ಲದೇ ಅವರು ಔತಣದ ಆನಂದವನ್ನೂ ಕಳಕೊಂಡರು. (2) ಆಮಂತ್ರಣವನ್ನು ಸ್ವೀಕರಿಸುವದಾದರೆ, ಸಂತೋಷದಿಂದಿರಲು ಯತ್ನಿಸಬೇಕು. ತನ್ನ ಔತಣದಲ್ಲಿ ದೇವರು ದುಃಖದ ಅತಿಥಿಗಳನ್ನು ಇಚ್ಛಿಸುವದಿಲ್ಲ.

## ಇದು ಪ್ರತಿಕ್ರಿಯೆಯನ್ನು ಬಯಸುವ ಆಮಂತ್ರಣವಾಗಿದೆ (ವಚನಗಳು 3-10, 14)

**ಸಾಮ್ಯ**

ಈಗ ಇತಿಹಾಸದ ಕಡೆಗೆ ಹೋಗೋಣ. "ಮದುವೆಗೆ ಹೇಳಿಸಿಕೊಂಡ ವರನ್ನು ಕರೆಯಲು ಅರಸನು ತನ್ನ ಆಳುಗಳನ್ನು ಕಳುಹಿಸಿದನು" (ವಚನ 3ಎ). ಇದರಲ್ಲಿ ಎರಡು ಆಮಂತ್ರಣಗಳಿರುತ್ತವೆ: ಈಗಾಗಲೇ ಕೆಲವರು ಔತಣಕ್ಕಾಗಿ ಕರೆಯಲ್ಪಟ್ಟಿದ್ದರು; ಔತಣವು ಸಿದ್ಧವಾದಾಗ, ಆಮಂತ್ರಣಗೊಂಡವರು ಬರಬೇಕಾದ ಸಮಯವು ಸಿದ್ಧವಾಯಿತು ಎಂದು ಆಳುಗಳು ಅವರನ್ನು ಕರೆದರು.[13]

ಆಮಂತ್ರಣ ಪಡೆದವರ ಗುಂಪಿಗೆ ಇಸ್ರಾಯೇಲ್ಯರು ಸಹ ಸೇರಿರುವರು.[14] ಮೆಸ್ಸೀಯನ ಔತಣಕ್ಕಾಗಿ ಬನ್ನಿರಿ ಎಂದು ಪ್ರವಾದಿಗಳ ಮೂಲಕ ಆಮಂತ್ರಣ ಹೊಂದಿದ್ದರು. ಸಾಮ್ಯದಲ್ಲಿನ ಎರಡನೆಯ ಆಮಂತ್ರಣದಂತೆ, ಯೆಹೂದ್ಯರು ಮೊದಲ ಆಮಂತ್ರಣವನ್ನು ಅಂಗೀಕರಿಸಿದ್ದರು. ಅಂದರೆ ಮೆಸ್ಸೀಯನ ರಾಜ್ಯದ ಕುರಿತ ಸಂದೇಶವನ್ನು ಒಪ್ಪಿದ್ದರು.

ಔತಣವು ಸಿದ್ಧವಾಗಿದೆ ಎಂಬ ವರ್ತಮಾನವನ್ನು ಕೇಳಿದವರು "ಬರುವದಕ್ಕೆ ಮನಸ್ಸು ಮಾಡಲಿಲ್ಲ" (ವಚನ 3ಬಿ). ಇದರಿಂದ ಅವರ ಮೂಢುತನ ಹಾಗೂ ವಿರೋಧ ನಡುವಳಿಕೆ ಹೊರ ಬಂದಿತು. ಹೇಗೂ ಅರಸನು ಅವರಿಗೆ ಮತ್ತೊಂದು ಅವಕಾಶವನ್ನು ನೀಡಿದನು. ಒಂದು ವೇಳೆ, ಅವರು ಆಮಂತ್ರಣ ನೀಡಿದ ಮೊದಲನೆಯವನು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಅರಸನು ತಿಳಿದಿರಬಹುದು. ಆದ್ದರಿಂದ, ಅವರ "ಸಂದೇಹದ" ಲಾಭವೇನು ಎಂದು ನಾನು ಅವರಿಗೆ ತೋರಿಸುತ್ತೇನೆ ...

> ... ನೀವು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಹೋಗಿ - ಇಗೋ. ಅಡಿಗೆ ಸಿದ್ಧವಾಗಿದೆ; ನನ್ನ ಹೋರಿಗಳನ್ನೂ ಕೊಬ್ಬಿದ ಪಶುಗಳನ್ನೂ ಕೊಯಿಸಿದ್ದೇನೆ; ಎಲ್ಲಾ ಸಿದ್ಧವಾಗಿದೆ; ಮದುವೆಯ ಊಟಕ್ಕೆ ಬನ್ನಿರೆಂಬುದಾಗಿ ಅವರಿಗೆ ಹೇಳಿರೆಂದು ಅಪ್ಪಣೆಕೊಟ್ಟು ಕಳುಹಿಸಿದನು (ವಚನ 4)

ಲೂಕ 14ರ ಸಾಮ್ಯದಲ್ಲಿ, ಅತಿಥಿಗಳು ಬಾರದೆ ಇರುವದಕ್ಕೆ ಅನೇಕ ಕಾರಣಗಳನ್ನು ನೀಡಿದರು. ಈ ಸಾಮ್ಯದಲ್ಲಿ, ಕರೆಯಲ್ಪಟ್ಟವರು ಆಮಂತ್ರಣವನ್ನು ನಿರ್ಲಕ್ಷಿಸಿದರು (ವಚನ 5ಎ). ಮೂಲ ಭಾಷೆಯ ಪ್ರಕಾರ, ಅವರ "ಅಲಕ್ಷ್ಯತನವನ್ನು" ಒತ್ತಿ ಹೇಳಲಾಗಿದೆ. ಇಬ್ರಿಯ 2:3 ಗ್ರೀಕ್ ಪದವನ್ನು "ಅಲಕ್ಷ್ಯ" ಎಂದು ಹೇಳಲಾಗಿದೆ. "ಅವರಿಗೆ ದೊರೆತ ಅವಕಾಶವನ್ನು ಅವರು ಒಪ್ಪಿಕೊಳ್ಳುವಲ್ಲಿ" ಸೋತುಹೋದರು. KJVಯಲ್ಲಿ "ಅವರು ಹಗುರಭಾವನೆ ತೋರಿದರು" ಎಂದಿರುತ್ತದೆ.

ಅರಸನಿಗೆ ಎರಡರಷ್ಟು ಅವಮಾನವಾಯಿತು. ಆತನು ಇತರರ ಕಾರ್ಯಗಳಲ್ಲಿ ತಲೆಹಾಕುವವನು ಎಂದು ಅವರುಗಳು ಭಾವಿಸಿ: "ಒಬ್ಬನು ತನ್ನ ಹೊಲಕ್ಕೆ ಮತ್ತೊಬ್ಬನು ತನ್ನ ವ್ಯವಹಾರಕ್ಕೂ ವ್ಯಾಪಾರಕ್ಕೂ ಹೊರಟುಹೋದರು" (ವಚನ 5ಬಿ). ಅದು ಕೆಟ್ಟ ಚಟುವಟಿಕೆಯಲ್ಲದಿದ್ದರೂ, ಅರಸನ ಆಹ್ವಾನ ಪ್ರಮುಖವಲ್ಲ ಎಂದು ತಿಳಿದರು. ವಿಲಿಯಮ್ ಬಾರ್ಕ್ಲೆಯವರು ಈ ಕುರಿತು ಬರೆದು,

> ಒಬ್ಬ ಮನುಷ್ಯನು ನಿತ್ಯವಾದ ಸಂಗತಿಗಳನ್ನು ಬದಿಗಿಟ್ಟು, ತಾತ್ಕಾಲಿಕವಾದ ಸಂಗತಿಗಳ ಕಡೆಗೆ ವ್ಯವಹರಿಸುವದು ಸಹಜವಾದದ್ದೇ, ಕಾಣದೆ ಇರುವ ಸಂಗತಿಗಳ ಬದಲು ಕಾಣುವ ಸಂಗತಿಗಳು ಆಸಕ್ತಿಕರವಾಗಿರುತ್ತದೆ. ಅವನು ಗೊಂದಲಮಯವಾದ ಪ್ರಪಂಚದಲ್ಲಿ ಮುಳುಗಿ, ಕ್ರಿಸ್ತನ ಮೃದುಸ್ವರವನ್ನು ಕೇಳದವನಾಗಿದ್ದಾನೆ. ಆದ್ದರಿಂದ ಉತ್ತಮವಲ್ಲದ್ದು, ಉತ್ತಮವಾದದ್ದನ್ನು ಮೀರಿ ಹೋಗುತ್ತದೆ. ಉತ್ತಮ ಎಂಬುದು ಬಹು ಉತ್ತಮವಾದದ್ದನ್ನು ಮುಚ್ಚಿಹಾಕುತ್ತದೆ ಎಂದಿರುವರು.[15]

ಇನ್ನು ಕೆಲವರು ಅರಸನ ಆಹ್ವಾನವನ್ನು ಬಹು ಕ್ರೂರವಾಗಿ ತಿರಸ್ಕರಿಸಿದರು: "ಉಳಿದವರು ಅವನ ಆಳುಗಳನ್ನು ಹಿಡಿದು, ಬೈದು ಕೊಂದುಹಾಕಿದರು" (ವಚನ 6). ಈ ಸಂಗತಿಯನ್ನು ಪ್ರವಾದಿಗಳಿಗೆ ಹಾಗೂ ಮುಂದೆ ಅಪೊಸ್ತಲರಾದವರಿಗೆ ಯೆಹೂದ್ಯರು ನೀಡಿದ ಹಿಂಸೆಗೆ ಹೋಲಿಕೆಯಾಗಿದೆ. ಕೆಲವರು ಅಲಕ್ಷಮಾಡಿದರೆ, ಇನ್ನು ಕೆಲವರು ಅದನ್ನು ವಿರೋಧಿಸಿದರು - ಆ ಎರಡರ ಅಂತಿಮ ಪರಿಣಾಮ ಒಂದೇ ಆಗಿತ್ತು.

ನಾನು ಇರುವ ಸ್ಥಳದಲ್ಲಿ ಇರುವವರು ಎರಡನೇ ವಿಧದವರಾಗಿದ್ದಾರೆ, ಆದರೆ ಮೊದಲಿನ ಸಂಗತಿ ಸಹಜವಾಗಿದೆ. ಅನೇಕರು ಬಹುಕಾರ್ಯನಿರತರಾಗಿದ್ದಾರೆ. ಇನ್ನು ಕೆಲವರು ಇತರರ ಕಾರ್ಯಗಳಲ್ಲಿ ಆಸಕ್ತರಾಗಿದ್ದು, ಅರಸನ ಆಮಂತ್ರಣವನ್ನು ನಿರಾಕರಿಸಿದ್ದಾರೆ.

ಅರಸನ ಆಳುಗಳಿಗೆ ಮಾಡಿದ ಸಂಗತಿಗಳನ್ನೇ, ಅರಸನಿಗೂ ಮಾಡಲಾಯಿತು.[16] ನಡೆದ ಸಂಗತಿಗಳನ್ನು ಕೇಳಿದ "ಅರಸನು ಸಿಟ್ಟುಗೊಂಡನು" (ವಚನ 7ಎ). ದೇವರು ಮೃದು ಸ್ವಭಾವದವನಾಗಿದ್ದರೂ, ಕೋಪಗೊಳ್ಳುವವನಾಗಿದ್ದಾನೆ, ಆತನು ಕೋಪಗೊಂಡಾಗ, ಹಿಂದೆ ಸರಿದು ನಿಲ್ಲುವದು ಒಳಿತು!

ಅರಸನು ತನ್ನ ದಂಡುಗಳನ್ನು ಕಳುಹಿಸಿ, ಆ ಕೊಲೆಗಾರರನ್ನು ನಾಶಮಾಡಿ ಅವರ ಪಟ್ಟಣಗಳನ್ನು ಸುಟ್ಟುಬಿಟ್ಟನು (ವಚನ 7ಬಿ). ಕ್ರಿ.ಶ. 70ರಲ್ಲಿ ರೋಮಾಯರು ನಾಶಮಾಡಿದ ಯೆರೂಸಲೇಮಿನ ಸಂಗತಿಗೆ ಇದು ಹೋಲಿಕೆಯಾಗಿರಬಹುದು.

ಹೇಗೂ ಔತಣವು ಸಿದ್ಧವಾಯಿತು. "ಅರಸನು ತನ್ನ ಆಳುಗಳಿಗೆ, ಮದುವೆ ಸಿದ್ಧವಾಗಿದೆ ಆದರೆ, ಕರೆಯಲ್ಪಟ್ಟವರು ಯೋಗ್ಯರಾಗಿರಲಿಲ್ಲ" (ವಚನ 8). ಅವರು ಆಮಂತ್ರಣವನ್ನು ನಿರಾಕರಿಸಿದ್ದರಿಂದ "ಅಯೋಗ್ಯರಾದರು" (ನೋಡಿ ಅಪೊಸ್ತಲರ ಕೃತ್ಯಗಳು 13:44-46). NIVಯಲ್ಲಿ "ಅವರು ಆಮಂತ್ರಣಕ್ಕೆ ಅರ್ಹರಾಗಲಿಲ್ಲ ಎಂದಿದೆ."

ಅರಸನು ಆಳುಗಳಿಗೆ, "ನೀವು ಈಗ ನಾಲ್ಕು ಹಾದಿಗಳು ಕೂಡುವ ಹಾದಿಗಳಿಗೆ ಹೋಗಿ ಕಂಡವರನ್ನೆಲ್ಲಾ ಮದುವೆಯ ಊಟಕ್ಕೆ ಕರೆಯಿರಿ" ಅಂದನು (ವಚನ 9). ಗ್ರೀಕ್ ಭಾಷಾಂತರದಂತೆ, ಮುಖ್ಯ ಮಾರ್ಗಗಳಲ್ಲಿ ಕೂಡುವ ಅಧಿಕ ಜನರನ್ನು ಕರೆಯಿರಿ.[17] NIVಯಲ್ಲಿ "ಬೀದಿಯ ಮೂಲೆಗಳು" ಎಂದಿದೆ. ನೀವಿರುವ ಸ್ಥಳಗಳಲ್ಲಿ ರಾತ್ರಿ ಹಗಲುಗಳಲ್ಲಿ ಜನರು ಸೇರಿ ಬರುವ ಪ್ರತೀತಿ ಇದೆಯೇ? ಮುಖ್ಯ ಹಾದಿ ಎಂದರೆ ಇದೇ ಅರ್ಥವಾಗಿದೆ. ಅರಸನು ಆಳುಗಳಿಗೆ "ಕಂಡವರನ್ನೆಲ್ಲಾ" ಮದುವೆಯ ಔತಣಕ್ಕೆ ಕರೆಯಿರಿ ಅಂದನು. "ಇದು ಒಂದು ಮಹಾ ಆಜ್ಞೆಯ" ರೀತಿಯಲ್ಲಿದೆ. ಅಲ್ಲವೇ? "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15).

ಅರಸನ ಅಪ್ಪಣೆಯಂತೆ ಆಳುಗಳು ಮಾಡಿದರು: "ಆ ಆಳುಗಳು ಹಾದಿಗಳಿಗೆ ಹೋಗಿ ಕೆಟ್ಟವರು ಒಳ್ಳೆಯವರು ಅನ್ನದೆ ಕಂಡವರೆನ್ನೆಲ್ಲಾ ಕೂಡಿಸಿ ಕರಕೊಂಡು ಬಂದರು" (ವಚನ 10ಎ).[18] ಕೆಟ್ಟ ಮತ್ತು ಒಳ್ಳೆಯ ಅಂದರೆ, ದೇವರ ರಾಜ್ಯದಲ್ಲಿ ಕೆಟ್ಟವರು ಇರುತ್ತಾರೆ ಎಂಬ ಅರ್ಥವಾಗಿರದೆ, ದೇವರು ಎಲ್ಲರನ್ನು ಪ್ರೀತಿಸಿ ಎಲ್ಲರನ್ನು ಆಹ್ವಾನಿಸುತ್ತಾನೆ. ಆತನ ಕಾಲದಲ್ಲಿನ ಕೆಟ್ಟವರು ನೀತಿವಂತರಿಗಿಂತ ಮೊದಲೇ ಆತನ ಬಳಿಗೆ ಬಂದರು ಎಂಬ ಸೂಚನೆಯಾಗಿದೆ (ಮತ್ತಾಯ 21:28-32).

ಕೃಪೆಯಿಂದ ರಕ್ಷಣೆ ಎಂಬ ತತ್ವವು ಇದರಲ್ಲಿ ಅಡಗಿದೆ. ಬೀದಿಯಲ್ಲಿ ಇದ್ದವರು ಆಮಂತ್ರಣಕ್ಕೆ ಅರ್ಹರಾಗಿರಲಿಲ್ಲ. ಅದಕ್ಕೆ ಬರುವ ಹಕ್ಕನ್ನು ಹೊಂದಿರಲಿಲ್ಲ. ಅದು ಕೃಪೆಯಿಂದ ಮಾತ್ರ ಸಾಧ್ಯವಾಯಿತು (ನೋಡಿ ಎಫೆಸ 2:8, 9).

ಆಳುಗಳು ಆ ಸ್ಥಳದಿಂದ ಜನರನ್ನು ಕರೆದ ನಂತರ, "ಜನರು ಮನೆ ತುಂಬ ಊಟಕ್ಕೆ ಕೂತರು" (ವಚನ 10ಬಿ). ಕೆಲವರು ಅರಸನ ಆಮಂತ್ರಣವನ್ನು ಅಲಕ್ಷ್ಯಮಾಡಿ ನಿರಾಕರಿಸಿದ್ದರಿಂದ, ಅವನು ಔತಣವನ್ನು ಸ್ಥಗಿತಗೊಳಿಸಲಿಲ್ಲ. ಅವನ ಔತಣದ ಮನೆಯು ಆಮಂತ್ರಣಗೊಂಡ ಅತಿಥಿಗಳಿಂದ ತುಂಬಲ್ಪಟ್ಟಿತ್ತು. ಹೀಗೆ ಯಾವುದೇ ವಿಧವಾದ ಜನರು

ದೇವರ ಉದ್ದೇಶ ಹಾಗೂ ಯೋಜನೆಗಳನ್ನು ತಡೆಯಲಾರರು.

**ತಾತ್ಪರ್ಯ**

ಸಾಮ್ಯದ ಮೊದಲ ಭಾಗದಿಂದ ಬಹಳಷ್ಟನ್ನು ಕಲಿತಿದ್ದೇವೆ. ಆದರೆ ಒಂದು ಪ್ರಮುಖ ಅಂಶವೇನೆಂದರೆ ಪ್ರತಿಯೊಬ್ಬರು ಆಮಂತ್ರಣವನ್ನು ಹೊಂದಿದ್ದಾರೆ. ಆದರೆ ಅದನ್ನು ಅಂಗೀಕರಿಸುವದು, ಅಥವಾ ತಿರಸ್ಕರಿಸುವದು ವ್ಯಕಿಗತ ನಿರ್ಧಾರವಾಗಿದೆ. ಹೇಗೂ ಆಮಂತ್ರಣವನ್ನು ನಿರಾಕರಿಸಿದರೆ, ಅರಸನಿಗೆ ಬಹು ದುಃಖ ಉಂಟು ಮಾಡುತ್ತೇವೆ.

ವಚನ 14ರಂತೆ: "ಹೀಗೆ ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ" "ಬಹು" ಅಂದರೆ "ಅನೇಕ":[19] ಸುವಾರ್ತೆಯ ಮೂಲಕ ಎಲ್ಲರೂ ಕರೆಯಲ್ಪಟ್ಟಿದ್ದಾರೆ (2 ಥೆಸಲೋನಿಕ 2:14). ಆದರೆ "ಕೆಲವರು" ಮಾತ್ರ ಆಯಲ್ಪಟ್ಟಿದ್ದಾರೆ. "ಆಯಲ್ಪಟ್ಟದ್ದು" ಅಂದರೆ, ಮದುವೆಯ ಔತಣವನ್ನು ಆನಂದಿಸುವವರು ಎಂಬ ಅರ್ಥ. ಯಾರನ್ನು ಆಯ್ಕೆ ಮಾಡಬೇಕೆಂದು ಅರಸನು ಸ್ವಂತ ನಿರ್ಧಾರ ಮಾಡಿದನೇ? ಇಲ್ಲ. ಆದರೆ ಆಮಂತ್ರಣ ಪಡೆದ ಪ್ರತಿಯೊಬ್ಬನು "ಆಯ್ಕೆ"ಯಾಗುವ ನಿರ್ಧಾರ ಮಾಡಬೇಕಿತ್ತು.

*ನೀವು* ಕ್ರೈಸ್ತರಾಗಬೇಕೆಂದು ದೇವರು ಇಚ್ಛಿಸುತ್ತಾನೆ. ತನ್ನ ವಿವಾಹದ ಔತಣಕ್ಕೆ ನೀವೆಲ್ಲರೂ ಬರಬೇಕೆಂಬ ಆಮಂತ್ರಣವನ್ನು ಆತನು ನೀಡಿದ್ದಾನೆ. "ಎಲೈ ಕಷ್ಟಪಡುವವರೇ ಹೊರೆ ಹೊತ್ತವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28). ಪುನಃ ಆತನು, "ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು" (ಪ್ರಕಟನೆ 3:20). ಪೌಲನು ಬರೆದು, "ರಕ್ಷಣೆಯ ದಿನದಲ್ಲಿ ನಿನಗೆ ಸಹಾಯಮಾಡಿದೆನು ಎಂದು ಹೇಳುತ್ತಾನಲ್ಲಾ" (2 ಕೊರಿಂಥ 6:2ಬಿ). "ಆತ್ಮನು ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ ..." (ಪ್ರಕಟನೆ 22:17). ಅಂತ್ಯದಲ್ಲಿ ಆತನ ಆಮಂತ್ರಣವನ್ನು ಅಂಗೀಕರಿಸುವದು, ಅಥವಾ ತಿರಸ್ಕರಿಸುವುದು ಒಬ್ಬನ ವ್ಯಯಕ್ತಿಕ ನಿರ್ಧಾರವಾಗಿದೆ.

## ಇದು ಒಂದು ಜವಾಬ್ದಾರಿವುಳ್ಳ ಆಮಂತ್ರಣವಾಗಿದೆ (ವಚನಗಳು 11-14)

**ಸಾಮ್ಯ**

ಇನ್ನು ಇದನ್ನು ನಾವು ಅಂತ್ಯಗೊಳಿಸಿರುವದಿಲ್ಲ. ಸಾಮ್ಯದ ಎರಡನೇ ಭಾಗವನ್ನು ಗಮನಿಸಬೇಕಿದೆ. ಆ ಮನೆಯು ತುಂಬಿದ ನಂತರ, "ಅರಸನು ಕೂತವರನ್ನು ನೋಡುವದಕ್ಕೆ ಬಂದನು" (ವಚನ 11ಎ). ನೆರದಿದ್ದವರೆಲ್ಲರು ಔತಣವನ್ನು ಆನಂದಿಸಲು ಸಜ್ಜಾಗಿದ್ದರು.

ಆಗ ಅರಸನ ದೃಷ್ಟಿಯು ಜನರ ಮೇಲೆ ಇರಲು "ಅಲ್ಲಿ ಒಬ್ಬನು ಮದುವೆ ಬಟ್ಟೆಯನ್ನು ಹಾಕಿಕೊಳ್ಳದೆ ಕುಳಿತ್ತಿದ್ದನು" (ವಚನ 11ಬಿ). ಇಂಥಹ ಕಾರ್ಯಕ್ರಮದಲ್ಲಿ ಯೋಗ್ಯವಾದ ಬಟ್ಟೆಯನ್ನು ಹಾಕಿಕೊಳ್ಳದೆ ಬರುವುದು ಅರಸನಿಗೆ ಅವಮಾನ ಮಾಡುವ ಕಾರ್ಯವಾಗಿದೆ.

> ಎರಡನೇ ಮಹಾ ಯುದ್ದದ ಜಯದ ನೆನಪಿಗಾಗಿ ರಷ್ಯಾದ ಅಧಿಕಾರಿಗಳು ಇಂಗ್ಲೆಂಡೀನ ವಿನ್‌ಸ್ಟನ್ ಚರ್ಚಿಲ್‌ರವರಿಗೆ ಒಂದು ಔತಣವನ್ನು ನೀಡಿದರು. ಆಗ ರಷ್ಯನ್ನರು ತಮ್ಮ ಸಮವಸ್ತ್ರಗಳನ್ನು ಧರಿಸಿ ಬಂದರು ಆದರೆ ಅವರ ಅತಿಥಿಗಳಾದ ಚರ್ಚಿಲ್‌ರವರು, ಲಂಡನಿನಲ್ಲಿ, ಜರ್ಮನ್ನರು, ಬಾಂಬ್ ಹಾಕಿದ ದಿನದಲ್ಲಿ ಧರಿಸಿದ್ಧ ವಸ್ತ್ರಗಳನ್ನೇ ಧರಿಸಿ ಬಂದಿದ್ದರು. ಇದರಿಂದ ರಷ್ಯನ್ನರು ವಿಚಲಿತರಾಗಬಹುದೆಂದು ಅವರು ತಿಳಿದಾಗ್ಯೂ ಅದು ಆ ರೀತಿ ಸಂಭವಿಸಲಿಲ್ಲ. ರಷ್ಯನ್ನರು ನೀಡಿದ ಆ ವಿಜ್ರಂಭಣೆಯ ಔತಣದಲ್ಲಿ ಚರ್ಚಿಲ್ಲರು

ಯೋಗ್ಯವಾದ ವಸ್ತುಗಳನ್ನು ಧರಿಸದೆ ಬಂದದ್ದು ಔತಣಕ್ಕೆ ದೊಡ್ಡ ಅವಮಾನ ಎಂದು ಪರಿಗಣಿಸಿದರು.[21]

ಎರಡನೇ ನಿದರ್ಶನ ಯಾವದೆಂದರೆ: ಒಬ್ಬ ತಂದೆಯು ತನ್ನ ಮಗಳ ಮದುವೆಗಾಗಿ ಬೆಲೆಯುಳ್ಳ ಒಂದು ನಿಲುವಂಗಿಯನ್ನು ಕೊಂಡುಕೊಂಡಿದ್ದಾಗ್ಯೂ, ಅವಳು ಮದುವೆಯ ದಿನ ಕೊಳಕಾದ ಅಂಗಿಯನ್ನು ಧರಿಸಿದರೆ, ತಂದೆಗೆ ವೇದನೆ ಆಗುವುದಿಲ್ಲವೇ? ಇದರ ಕುರಿತ ಇತರೆ ಉದಾಹರಣೆಗಳನ್ನು ನೆನಪು ಮಾಡಿರಿ.

ಮದುವೆಯ ಮನೆಯಲ್ಲಿ, ಮದುವೆಯ ಬಟ್ಟೆಯನ್ನು ಧರಿಸದೆ ಬಂದ ವ್ಯಕ್ತಿಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಇರುತ್ತವೆ. ಜನರು ಇದರ ಬಗ್ಗೆ ಪ್ರಶ್ನೆಯನ್ನು ಹೊಂದಿದ್ದು ಬೀದಿಗಳಿಂದ ಬಂದ ಜನರು ಏಕೆ ಮದುವೆ ಬಟ್ಟೆ ಧರಿಸಬೇಕು, ಏಕೆ ಅರಸನು ಈ ರೀತಿ ಬಯಸಿದನು? ಇದಕ್ಕೆ ತಕ್ಕ ಉತ್ತರವೇನೆಂದರೆ, ಮಧ್ಯ ಪ್ರಾಚ್ಯ ಸಂಸ್ಕೃತಿಯಲ್ಲಿ ಮದುವೆಯ ದಿನ, ಒಬ್ಬನು ಬಾಗಿಲಿನಲ್ಲಿ ನಿಂತು, ಮದುವೆಯ ಬಿಳಿಯ ಬಟ್ಟೆಗಳನ್ನು ಸರಭರಾಜು ಮಾಡುತ್ತಾನೆ.[22] ನಾನಿರುವ ಪ್ರದೇಶದಲ್ಲಿ ಈಗಲೂ ಸಹ ಮದುವೆಯ ಸಂಬಂಧಿಕರು ವಿಶೇಷವಾದ ವಸ್ತ್ರಗಳನ್ನು ಧರಿಸಿರುತ್ತಾರೆ (ಪಾಲೆಸ್ತೇನಿನಲ್ಲೂ ಇದೇ ವಿಧವಾದ ಆಚರಣೆ ಇರಬಹುದು). ಒಂದು ವೇಳೆ ಆ ಮನುಷ್ಯನು ತನಗೆ ನೀಡಲಾದ ವಸ್ತ್ರವನ್ನು ನಿರಾಕರಿಸಿರಬಹುದು. ಅರಸನು ಅವರಿಗೆ ಆಮಂತ್ರಣ ನೀಡಿದ ಸಮಯದಲ್ಲಿ, ಅವರು ತಮ್ಮ ಮನೆಗಳಿಗೆ ಹೋಗಿ ಸ್ವಚ್ಛವಾಗಿ ಬರಲು ಅವಕಾಶವನ್ನು ಸಹ ನೀಡಿರಬಹುದು, ಈ ಪರಿಸ್ಥಿತಿಯಲ್ಲಿ ಆ ಮನುಷ್ಯನು ಮದುವೆಯ ಬಟ್ಟೆಯನ್ನು ಧರಿಸಲೇ ಬೇಕಿತ್ತಲ್ಲವೇ.

ವಿವರಣೆಗಳು ತಿಳಿಯುವ ಅಗತ್ಯವು ನಮಗಿರುವುದಿಲ್ಲ. ಹೇಗೂ ಆ ಮನುಷ್ಯನು ಸಿದ್ಧನಾಗುವದಕ್ಕೆ ಅವಕಾಶವಿತ್ತು. ಆದರೆ ಅವನು ಸಿದ್ಧನಾಗಲಿಲ್ಲ. ಮುಂದಿನ ವಚನದ ಪ್ರಕಾರ ಅವನು ಕಾರಣ ನೀಡಲು ಅವಕಾಶವಿರಲಿಲ್ಲ ಎಂದು ನೋಡುತ್ತೇವೆ.

ಮನುಷ್ಯನು ಮದುವೆಯ ಬಟ್ಟೆ ಧರಿಸಿರಲಿಲ್ಲವೆಂದು ಅರಸನು ನಿರ್ಣಯಿಸಿದನು. ನಮ್ಮನ್ನು ಕುರಿತು ದೇವರು ತಾನೇ ನಿರ್ಣಯಿಸುವವನಾಗಿದ್ದಾನೆ. ಬಟ್ಟೆ ಅಂದರೆ ನಮ್ಮ ಅಂತರಾಳದ ಶುದ್ಧತೆ ವಿನಃ ಹೊರಗಿನ ಆಡಂಬರವಲ್ಲ.[23] ಈ ನಿರ್ಣಯ ಮಾಡಲು ನಾನು ಅರ್ಹನಲ್ಲ, ಕೆಲವರು ಅಂತರಾಳದಲ್ಲಿ ಶುದ್ಧರು ಎಂದು ನಾನು ತಿಳಿಯದೆಲೂ ಬಹುದು ಮತ್ತು ತಿಳಿಯದೆಯೂ ಇರಬಹುದು (ನೋಡಿ 1 ಸಮುವೇಲ 16:7). ದೇವರು ಮಾತ್ರ ಅಂತರಾಳವನ್ನು ಅರಿತಿದ್ದಾನೆ (ಅಪೊಸ್ತಲರ ಕೃತ್ಯಗಳು 15:8). ಕರ್ತನು *ನನ್ನ* ಹೃದಯವನ್ನು ನೋಡುವಾಗ, ಏನನ್ನು ಗಮನಿಸುತ್ತಾನೆ? ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು."

ಮದುವೆಯ ಬಟ್ಟೆಯನ್ನು ಧರಿಸದವನನ್ನು ಅರಸನು ಸ್ನೇಹಿತನೇ[24] ಮದುವೆಯ ಬಟ್ಟೆ ಇಲ್ಲದೆ ನೀನಿಲ್ಲಿಗೆ ಹೇಗೆ ಒಳಕ್ಕೆ ಬಂದಿ? (ಮತ್ತಾಯ 22:12ಎ) ಅಂದನು. ಆತನು ಅವನಿಂದ ವಿವರಣೆಯನ್ನು ಕೇಳಿದನು.[25] ಅವನು ಸರಿಯಾದ ಕಾರಣ ನೀಡಿದ್ದರೆ, ಕ್ಷಮೆಯಿತ್ತು ಎಂಬ ಸೂಚನೆಯಿದೆ. ಹಾಗೂ ಅವನು ಸುಮ್ಮನಿದ್ದನು (ವಚನ 12ಬಿ). "ಸುಮ್ಮನಿದ್ದನು" ಅಂದರೆ "ಬಾಯಿಮುಚ್ಚಿದ್ದನು" "ಮೌನಿ" ಎಂಬುದು ಗ್ರೀಕ್ ಅನುವಾದವಾಗಿದೆ.[26] ಅವನು ಕಾರಣ ನೀಡಲಿಲ್ಲ (ಮತ್ತಾಯ 13:41; ನೋಡಿ ಮತ್ತಾಯ 13:49; ಲೂಕ 19:24).

ಆ ಮೇಲೆ ಅರಸನು ಸೇವಕರಿಗೆ [ಅವನ ಕೈಕಾಲು ಕಟ್ಟಿ,],[27] ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಎಂದು ಹೇಳಿದನು ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು (ಮತ್ತಾ 22:13ಬಿ). ಸಾಮ್ಯದ ಅರ್ಥವನ್ನು ಊಹಿಸಲು, ಅವನನ್ನು ರಾತ್ರಿಯ ಕತ್ತಲಿನಲ್ಲಿ ತಳ್ಳಿರಿ ಬೆಳಕಿನಿಂದ, ಹಾಗೂ ಔತಣದಿಂದ ದೂರ ಹಾಕಿರಿ. "ಅವನು ಅದ್ಭುತ ವಾದ ಅವಕಾಶವನ್ನು ಕಳಕೊಂಡಿದ್ದರಿಂದ ತನ್ನ ಹಲ್ಲುಗಳನ್ನು ಕಡಿಯಲಿ" ಎಂಬುದಾಗಿದೆ. ನರಕದ ಯಾತನೆಯ (ಮತ್ತಾಯ 8:12; 25:30) ಇನ್ನೊಂದು ಹೇಳಿಕೆಯು ಇರುತ್ತದೆ.

**ತಾತ್ಪರ್ಯ**

ಸಾಮ್ಯದಲ್ಲಿರುವ ಸಾಮ್ಯದ ಪ್ರಕಾರ ಕರ್ತನ ಆಮಂತ್ರಣವನ್ನು ಮಾತ್ರ ಅಂಗೀಕರಿಸದೆ,[28] ಅದಕ್ಕೆ ಸರಿಯಾದ ಮಾನವನ್ನು ಸಲ್ಲಿಸಬೇಕಿದೆ.[29]

ವಿಶೇಷವಾಗಿ ಆತ್ಮೀಕ ಬಟ್ಟೆಯನ್ನು ಧರಿಸಿಕೊಳ್ಳಬೇಕು. ಆ ಆತ್ಮೀಕ ಬಟ್ಟೆಯ ಬಗ್ಗೆ ಪೌಲನು ಎಫೆಸ 4:22-24ರಲ್ಲಿ ತಿಳಿಸಿರುವನು: "ಹಳೆಯದನ್ನು ತೆಗೆದುಹಾಕಿ, ಹೊಸದನ್ನು ಧರಿಸಿಕೊಳ್ಳಿರಿ" (ಕೊಲೊಸ್ಸೆ 3:10, 12, 14). ಗಲಾತ್ಯದ ಕ್ರೈಸ್ತರಿಗೆ ಅಪೊಸ್ತಲನು ಬರೆದು: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26, 27; ಒತ್ತಿ ಹೇಳಿದ್ದು ನನ್ನದು; ಇದನ್ನು ನೋಡಿ ರೋಮಾಪುರ 13:14). "ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡುಕೊಂಡರು" (ಪ್ರಕಟನೆ 7:9, 14; ಮತ್ತು ನೋಡಿ ಪ್ರಕಟನೆ 3:4, 5, 18; 6:11; 22:14). ನಾವು ಕ್ರೈಸ್ತರಾದ ತಕ್ಷಣ "ಶುಭ್ರವಸ್ತ್ರಧಾರಿಗಳಾಗಿರಬೇಕು," ಅದನ್ನು ಶುದ್ಧವಾಗಿಡಬೇಕು (ನೋಡಿ ಯಾಕೋಬ 1:27). ನಂಬಿಗಸ್ತರಾಗಿ ಬದುಕುವದರಿಂದ (ಪ್ರಕಟನೆ 2:10). ಪಾಪ ಮಾಡಿದಾಗ ಆತನ ಬಳಿಗೆ ತಿರುಗಿಕೊಳ್ಳಬೇಕು (1 ಯೋಹಾನ 1:7, 9).

ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ ಎಂದರೆ, ಅದು "ಬೆಲೆ ಇಲ್ಲದ ಕೃಪೆಯಿಲ್ಲ,"[30] ಪೌಲನ ದಿನಗಳಲ್ಲಿದ್ದ ಕೆಲವರು, "ಕೃಪೆಯಿಂದ ರಕ್ಷಣೆ ಹೊಂದಿದ ನಂತರ, ತಮ್ಮ ಇಚ್ಛೆಗನುಗುಣವಾಗಿ ಬದುಕಬಹುದು" ಎಂದು ಬೋಧಿಸುತ್ತಿದ್ದರು, ಅಪೊಸ್ತಲನು ಇದನ್ನು ಕುರಿತು,

> ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರ ರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು (ರೋಮಾಪುರ 6:1-4).

"ಕರೆಯಲ್ಪಟ್ಟವರು, ಅನೇಕರು, ಆಯ್ಕೆಯಾದವರು ಕೆಲವರೇ" ಎಂದು ಯೇಸು ಅಂತಿಮವಾಗಿ ತಿಳಿಸಿದನು (ಮತ್ತಾಯ 22:14). "ಐಗುಪ್ತದಿಂದ ಕರೆಯಲ್ಪಟ್ಟವರು ಅನೇಕರು, ಆದರೆ ವಾಗ್ದಾನದ ಕಾನಾನನ್ನು ಸೇರಿದವರು ಕೆಲವರೇ" ಎಂಬ ಹೇಳಿಕೆಯನ್ನು ಯೆಹೂದ್ಯರು ಹೊಂದಿದ್ದರು. "ಔತಣಕ್ಕೆ ಅನೇಕರು ಕರೆಯಲ್ಪಟ್ಟಿದ್ದರೂ, ಔತಣವನ್ನು ಸವಿದವರು ಕೆಲವರೇ" ಎಂಬ ಅರ್ಥವಾಗಿದೆ.

## ಮುಕ್ತಾಯ

ಒಂದು ಪ್ರಸಿದ್ಧ ಹಾಡು,

"ಎಲ್ಲವು ಸಿದ್ಧವಾಗಿದೆ" ಔತಣಕ್ಕೆ ಬನ್ನಿರಿ!

ಆಹಾರದ ಮೇಜಿದೆ ಈಗಲೇ ಬನ್ನಿರಿ.
ಸೋತವರು ಬನ್ನಿರಿ
ನಿಮಗೆ ಉತ್ತಮವಾದ ಪೋಷಣೆ ದೊರೆಯುತ್ತದೆ.[31]

ದೇವರ ಆತ್ಮೀಕ ಔತಣವನ್ನು ನೀವು ಸವಿಯಬೇಕೆಂದು, ಯೇಸು ಸತ್ತನು. ಆತನ ಆಮಂತ್ರಣವನ್ನು ನಿರ್ಲಕ್ಷಮಾಡಿ, ಅರಸನನ್ನು ಅವಮಾನಿಸಬೇಡಿರಿ. ಆತ್ಮವು ನಾಶವಾಗಲಿದೆ, ಆದ್ದರಿಂದ "ಹೌದು" ಎಂದೇಳಿ ಆತನ ಬಳಿಗೆ ಬನ್ನಿರಿ.

---

**ಮಾಹಿತಿ**

"ಐಶ್ವರ್ಯವಂಥನ ಆಮಂತ್ರಣ" ಎಂಬದು ಇನ್ನೊಂದು ತಲೆಬರಹ.

---

ಟಿಪ್ಪಣೆಗಳು

[1]ನೀವಿರುವ ಸ್ಥಳಕ್ಕನುಗುಣವಾದ ಆಮಂತ್ರಣವನ್ನು ಬಳಸಿರಿ. [2]"ಒಂದು ಕೊಂಡರೆ ಎರಡು" ಎಂದು ನಮ್ಮ ಕಡೆಯ ವ್ಯಾಪಾರಿಗಳು ಹೇಳುವ ಹಾಗೆಯೇ, "ಒಂದು ಬೆಲೆಗೆ" ಎರಡು ಸಾಮ್ಯಗಳು. [3]KJVಯಲ್ಲಿ "ಮದುವೆ," ಎಂದಿದೆ ಆದರೆ ವಾಕ್ಯವು ವಿವಾಹದ ಔತಣವನ್ನು ಕುರಿತು ಹೇಳುತ್ತದೆ. NIVಯಲ್ಲಿ "ಮದುವೆ ಭೋಜನ" ಎಂದಿದೆ. [4]KJVಯಲ್ಲಿ "ಸೇವಕರು" ಎಂದಿದೆ. ಆದರೆ ಗ್ರೀಕ್ ಪದವು "ಗುಲಾಮರು" ಎಂಬ ಪದ. [5]ಮದುವೆಯ ಸಂಕೇತದ ಕುರಿತು ಯೆಶಾಯ 61:10; 62:5; ಹೋಶೆಯ 2:19 ನೋಡಿ. "ಹಬ್ಬದ ಸಂಕೇತಕ್ಕೆ" ಯೆಶಾಯ 25:6; 65:13 ನೋಡಿ. (ಮತ್ತು ನೋಡಿ ಲೂಕ 14:15.) [6]ಮದುವೆಯ ಸಂಕೇತ, ನೋಡಿ ಮತ್ತಾಯ 9:15; ಯೋಹಾನ 3:29. ಹಬ್ಬದ ಸಂಕೇತ, ನೋಡಿ ಮತ್ತಾಯ 8:11, 12; ಲೂಕ 22:30. [7]ಯೆಹೂದ್ಯರಲ್ಲಿ ಮದುವೆಯ ಎರಡು ಪದ್ಧತಿ: ಮದುವೆ ನಿಶ್ಚಯ ಹಾಗೂ ಮದುವೆ ಆಚರಣೆ. ಇವೆರಡನ್ನು ಸಭೆ ಮತ್ತು ಕ್ರಿಸ್ತನ ಸಂಬಂಧಕ್ಕೆ ಹೋಲಿಸ ಲಾಗಿದೆ. 2 ಕೊರಿಂಥ 11:2 ಮದುವೆಯ ನಿಶ್ಚಯದ ಬಗ್ಗೆ ಹೇಳುತ್ತದೆ, ಎಫೆಸ 5ರಲ್ಲಿ ಮದಲಗಿತ್ತಿಯ ಕುರಿತಾಗಿದೆ. ಅದರ ಹೆಚ್ಚಿನ ವಿವರಣೆ ಅಗತ್ಯವಿಲ್ಲ. [8]"ಕೂಟ ಈಗಲೇ ಆರಂಭವಾಗಿದೆ!" ಎಂದು ಬರಹಗಾರರು ಹೇಳಬಹುದು. [9]ಕ್ರೈಸ್ತ ಜೀವನವನ್ನು ಶವಸಂಸ್ಕಾರಕ್ಕೆ ಹೋಲಿಸುವ ಯಾವುದೇ ಸಾಮ್ಯಗಳಿರುವದಿಲ್ಲ ಎಂದು ಹಲವರು ಹೇಳುತ್ತಾರೆ. [10]ಪಿಲಾತನ ಕಾಲದ Publius Lentulus ಬರೆದ ಲ್ಯಾಟೀನ್ ಪತ್ರ. ಈ ಸಮಾಚಾರವು Neil R. Lightfoot, *The Parables of Jesus,* Part 2 (Austin, Tex.: R. B. Sweet Co., 1965), 12 ರಿಂದ ಬರುತ್ತದೆ.

[11]ನಗದೆ ಇರುವವರ ಬಳಿಯಲ್ಲಿ ಯಾರೂ ಸುಳಿಯಲಾರರು, ಆದರೆ ಯೇಸುವಿನ ಬಳಿ ಬರಲು ಜನರು ಆನಂದಿಸಿದರು. ಯೇಸುವಿನ ಅನೇಕ ಬೋಧನೆಗಳು ಸಂತೋಷದಿಂದ ತುಂಬಿರುತ್ತದೆ. [12]Lightfoot, 12. ಮುಂದಿನ ವಾಕ್ಯವೃಂದವು ಇದೇ ಮೂಲದಿಂದ ಬಂದಿದೆ. [13]ಎರಡು ಆಮಂತ್ರಣಗಳ ಉದಾಹರಣೆಯನ್ನು ಎಸ್ತೆರಳ ಪುಸ್ತಕದಿಂದ ವಿವರಿಸಬಹುದು: ಎಸ್ತೆರಳು ಹಮಾನನನ್ನು (ಎಸ್ತೆರಳು 5:8) ಭೋಜನಕ್ಕೆ ಕರೆದು, ನಂತರ ಕಾಲವು ಸಮೀಪಿಸಿದಾಗ ಆಕೆಯು ಆಳುಗಳಿಂದ ಕರೆ ಕಳುಹಿಸಿ ಆತನನ್ನು ಕರೆತಂದಳು (ಎಸ್ತೆರಳು 6:14). [14]ಈ ಆಮಂತ್ರಣದಲ್ಲಿ ಯೆಹೂದ್ಯರು ಹಾಗೂ "ಧಾರ್ಮಿಕ" ನಾಯಕರೂ ಒಳಗೊಂಡಿದ್ದರು. ಸ್ನೇಹಿತರು ಆಹ್ವಾನಿಸಲ್ಪಟ್ಟಿದ್ದರು. ಯೆಹೂದ್ಯರು ದೇವರಿಂದ ಆಯ್ಕೆ ಮಾಡಲ್ಪಟ್ಟ ಜನರು ಅವರು ದೇವರಿಗೆ ಮುಖ್ಯವಾದವು ಮತ್ತು ಆತನ ಸ್ನೇಹಿತರೇ ಆಗಿದ್ದರು. [15]William Barclay, *The Gospel of Matthew,* vol. 2, rev. ed., The Daily Study Bible Series (Philadelphia: Westminster Press, 1975), 268. [16]ಭಯೋತ್ಪಾದಕರು ಅಮೇರಿಕಕ್ಕೆ ಬಾಂಬ್ ಹಾಕುವುದಾದರೆ, ಅದರಲ್ಲಿ ಕೊಲ್ಲಲ್ಪಡುವ ವ್ಯಕ್ತಿಗತ ಜನರಿಗೆ ಸಂಬಂಧಿಸದಲ್ಲ, ಅದು ಅಮೇರಿಕ ದೇಶಕ್ಕೆ ಸಂಬಂಧಿಸಿರುತ್ತದೆ. ಈ ನಿದರ್ಶನವನ್ನು ನೀಡಬಹುದು. [17]ನನ್ನ ಬೈಬಲಿನ ಪ್ರಕಾರ "ಬೇರ್ಪಡಿಸುವ ರಸ್ತೆ." ಹಲವು ಪ್ರದೇಶಗಳಲ್ಲಿ "ತಿರುವು ರಸ್ತೆ" ಎಂಬ ಅರ್ಥಕೊಡುತ್ತದೆ. [18]ಮುಂದಿನ ಪಾಠದಲ್ಲಿ ಸಂದರ್ಭವನ್ನು ವಿವರಿಸಿ "ಕೆಟ್ಟದ್ದು ಮತ್ತು ಒಳ್ಳೆಯದು" ಎಂಬುದು ಯೆಹೂದ್ಯರಲ್ಲಿನ "ಧಾರ್ಮಿಕವಲ್ಲದ" ಗುಂಪನ್ನು, ಬಹುಶಃ ಅನ್ಯರನ್ನು ಸಹ ಸೂಚಿಸುತ್ತದೆ. [19]ವಾಕ್ಯದಲ್ಲಿ "ಅನೇಕ" ಎಂಬ ಪದವು "ಎಲ್ಲಾ" ಎಂಬ ಅರ್ಥದಿಂದ ಬಳಸಲಾಗಿದೆ. "*ಅನೇಕರ* ಪರವಾಗಿ" (ಮತ್ತಾಯ

20:28; ಒತ್ತಿ ಹೇಳಿದ್ದು ನನ್ನದು) ಎಂಬುದನ್ನು "*ಎಲ್ಲರ ಪರವಾಗಿ*" (1 ತಿಮೋಥೆ 2:6; ಒತ್ತಿ ಹೇಳಿದ್ದು ನನ್ನದು) ಎಂಬುದರೊಂದಿಗೆ ಹೋಲಿಸಿ. [20]ಪಂಡಿತರು ವಸ್ತ್ರವು ಯಾವುದೆಂಬುದರ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಅತಿಥಿಯ ಉತ್ತಮ ವಸ್ತ್ರವಾಗಿದೆ.

[21]Eldred Echols, *Discovering the Pearl of Great Price* (Fort Worth, Tex.: Sweet Publishing, 1992), 167. [22]Ibid., 171. ಬಡವರನ್ನು ತೊಂದರೆಗೀಡುಮಾಡದಂಗೆ ಇರಲು ಎಂದು ನಾನು ಅರ್ಥಮಾಡಿಕೊಂಟಿದ್ದೇನೆ. ಆರ್ಥಿಕ ಮತ್ತು ಸಾಮಾಜೀಕ ಸ್ಥಿತಿಗಳಿಗೆ ಭಿನ್ನವಾಗಿ ಎಲ್ಲರು ಒಂದೇ ತರಹ ವಸ್ತ್ರಗಳನ್ನು ತೊಳಗಿಕೊಂಡಿದ್ದಾರೆ. [23]"ಆತ್ಮಿಕವಾಗಿ ಧರಿಸುವ ಬಟ್ಟೆಯ ಬಗ್ಗೆ ಸತ್ಯವೇದ ಮಾತನಾಡುತ್ತದೆ. ಯೋಬ 29:14; ಯೆಶಾಯ 61:10; ಯೆಹೆಜ್ಕೇಲನು 16:10ರಲ್ಲಿ ಹಳೇ ಒಡಂಬಡಿಕೆಯ ಉದಾಹರಣೆಗಳನ್ನು ಕಾಣಬಹುದು. ಅನೇಕ ಹೊಸ ಒಡಂಬಡಿಕೆಯ ವಾಕ್ಯಗಳನ್ನು ಈ ಪಾಠದಲ್ಲಿ ಕೊಡಲಾಗಿದೆ. ಇದರ ಜೊತೆಗೆ ದೇವರ ಆಯುಧಗಳನ್ನು "ಧರಿಸಿ" (ರೋಮಾಪುರ 13:12; ಎಫೆಸ 6:11-17; 1 ಥೆಸಲೋನಿಕ 5:8) ಎಂಬುವುದನ್ನು ಸೇರಿಸಿ. [24]"ಪ್ರೀತಿ" ಎಂಬುದಕ್ಕೆ "ಸ್ನೇಹ" ಸುವಾರ್ತೆಗಳಲ್ಲಿ ಎನ್ನಲಾಗಿದೆ, ಆದರೆ ಇಲ್ಲಿ ಉಪಯೋಗಿಸಿದ ಪದವು ಅದಲ್ಲ. ಈ ಪದವನ್ನು "ಕಾಮ್‌ರೆಡ್" ಅಥವಾ "ಜೊತೆಗಾರ" ಎಂದು ಅನುವಾದಿಸಬಹುದು ಹೊಸ ಒಡಂಬಡಿಕೆಯಲ್ಲಿ ಮತ್ತಾಯನು ಮಾತ್ರವೇ ಈ ಪದವನ್ನು ಬಳಸಿದ್ದಾನೆ ಮತ್ತು ಈ ಪದಬಳಕೆಯಲ್ಲಿ ಮುಖ್ಯವಾಗಿ ಅಡಗಿರುವ ವ್ಯತ್ಯಾಸದ ಅರ್ಥವನ್ನು ಕೊಡುತ್ತದೆ (ಮತ್ತಾಯ 20:13; 26:50). [25]ಗ್ರೀಕ್‌ನ *Doulos* ಎಂದರೆ "ಗುಲಾಮ." ಇಲ್ಲಿ ಬಳಸಿದ ಗ್ರೀಕ್ ಪದವು *diakonos.* [26]Richard C. Trench, *Notes on the Parables of Our Lord* (Westwood, N.J.: Fleming H. Revell Co., 1953), 243. [27]ನೋಡಿ ಲೂಕ 16:26. [28]ನಂಬಿಕೆ ಹಾಗೂ ವಿಧೇಯತೆಯಿಂದ ಮಾಡುತ್ತೇವೆ. [29]ನಂಬಿಗಸ್ತಿಕೆಯ ಕ್ರೈಸ್ತ ಜೀವನವನ್ನು ಜೀವಿಸುವದರ ಮೂಲಕ ಇದನ್ನು ಮಾಡುತ್ತೇವೆ. [30]"ಚೀಪ್ ಗ್ರೇಸ್" ಎಂಬುದು Dietrich Bonhoeffer (1906-45), a German theologian ರೊಂದಿಗೆ ಸಂಬಂಧವಿದೆ.

[31]Charlotte G. Homer, "Come to the Feast," *Songs of the Church*, comp. and ed. Alton H. Howard (West Monroe, La.: Howard Publishing Co., 1977). ನಿಮ್ಮ ಓದುಗರಿಗೆ ಈ ಹಾಡು ಪರಿಚಯವಿದ್ದರೆ ಪ್ರಸಂಗದ ಅಂತ್ಯದಲ್ಲಿ ಹಾಡಬಹುದು.